ಸರ್ಕಾರಿ ಗೋಮಾಳ ಜಮೀನು

939 (1521); ಶ್ರೀ ಎಂ.ಟಿ.ಬಿ. ನಾಗರಾಜ್ (ಹೊಸಕೋಟೆ)

ಅ) ಹೊಸಕೋಟೆ ತಾಲ್ಲೂಕು, ಸೂಲಿಬೆಲೆ ಹೋಬಳಿ, ಕಂಬಳೀಪುರ ಗ್ರಾಮದ ಸ.ನಂ. 127 ರಲ್ಲಿರುವ ಸರ್ಕಾರಿ ಗೋಮಾಳದ ವಿಸ್ತೀರ್ಣವೆಷ್ಟು;

ಆ) ಹಾಗಿದ್ದಲ್ಲಿ, ಕೆ.ಐ.ಎ.ಡಿ.ಬಿ. ಗೆ ಭೂ ಸ್ವಾಧೀನವಾಗಿರುವ ಜಮೀನಿನ ವಿಸ್ತೀರ್ಣವೆಷ್ಟು; ರಾಜೀವ್ ಗಾಂಧಿ ಪೆಟ್ರೋಲಿಯಂ ಪಾರ್ಕ್‌ನ ವಶಕ್ಕೆ ನೀಡಿರುವ ಜಮೀನಿನ ವಿಸ್ತೀರ್ಣವೆಷ್ಟು; (ವಿವರ ನೀಡುವುದು)

ಇ) ಸದರಿ ಜಮೀನಿನಲ್ಲಿ ಸ್ವಾಧೀನಾನುಭವದಲ್ಲಿರುವ ರೈತರುಗಳ ಸಂಖ್ಯೆ ಎಷ್ಟು; ರೈತರಿಗೆ ನೀಡಿರುವ ಪರಿಹಾರವೇನು; (ವಿವರಗಳನ್ನು ನೀಡುವುದು)

ಈ) ಸ್ವಾಧೀನಾನುಭವದಲ್ಲಿರುವ ರೈತರಿಗೆ ಪರಿಹಾರ ನೀಡಲು ಸರ್ಕಾರಕ್ಕೆ ಇರುವ ತೊಂದರೆಗಳೇನು?

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಮಾನ್ಯ ಕಂದಾಯ ಸಚಿವರು)

ಅ) ಹೊಸಕೋಟೆ ತಾಲ್ಲೂಕು, ಸೂಲಿಬೆಲೆ ಹೋಬಳಿ, ಕಂಬಳೀಪುರ ಗ್ರಾಮದ ಸ.ನಂ. 127 ರಲ್ಲಿರುವ ಸರ್ಕಾರಿ ಗೋಮಾಳದ ವಿಸ್ತೀರ್ಣ 302–11 ಎಕರೆ/ಗುಂಟೆ

ಆ) ಕಂಬಳೀಪುರ ಗ್ರಾಮದ ಸ.ನಂ. 302–11 ಗುಂಟೆ ಕೆ.ಐ.ಎ.ಡಿ.ಬಿ. ಗೆ ಭೂ ಸ್ವಾಧೀನವಾಗಿರುತ್ತದೆ. ಈ ಪೈಕಿ ಕೆ.ಐ.ಎ.ಡಿ.ಬಿ. ಯಿಂದ ರಾಜೀವ್ ಗಾಂಧಿ ಪೆಟ್ರೋಲಿಯಂ ಪಾರ್ಕ್‌ನ ವಶಕ್ಕೆ ನೀಡಿರುವ ಜಮೀನಿನ ವಿಸ್ತೀರ್ಣ 150–00 ಎಕರೆ.

ಇ) ಸದರಿ ಜಮೀನಿನಲ್ಲಿ ಸ್ವಾಧೀನಾನುಭವದಲ್ಲಿರುವ ರೈತರುಗಳ ಸಂಖ್ಯೆ: 30 ಈ ಪೈಕಿ 6 ಜನರಿಗೆ 19–37 ಗುಂಟೆ ಮಂಜೂರಾಗಿದ್ದು, ಉಳಿದ

24 ಜನರು ಅನಧಿಕೃತವಾಗಿ ಸಾಗುವಳಿ ಮಾಡುತ್ತಿರುತ್ತಾರೆ. ಭೂಸ್ವಾಧೀನವಾದ ಜಮೀನಿಗೆ ಇನ್ನು ಪರಿಹಾರ ನೀಡಿರುವುದಿಲ್ಲ.

ಈ) 19–37 ಎಕರೆ ಮಂಜೂರಿದಾರರಾದ ರೈತರಿಗೆ ಅಂತಿಮ ಅಧಿಸೂಚನೆ ಹೊರಡಿಸಿದ ನಂತರ ಪರಿಹಾರ ನೀಡಲಾಗುವುದು.

ಖಾಸಗಿ ಕಾರ್ಖಾನೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕರ ಶೋಷಣೆ

940 (1522); ಶ್ರೀ ಎಂ.ಟಿ.ಬಿ. ನಾಗರಾಜ್ (ಹೊಸಕೋಟೆ)

ಅ) ಹೊಸಕೋಟೆ ತಾಲ್ಲೂಕಿನಲ್ಲಿ ಖಾಸಗಿ ಕಾರ್ಖಾನೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ಥಳೀಯ ಕಾರ್ಮಿಕರಿಗೆ ಶೋಷಣೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಕಾರ್ಮಿಕರ ಶೋಷಣೆ ನೀಗಿಸಲು ಇರುವ ನಿಯಮಗಳೇನು? (ಮಾಹಿತಿ ನೀಡುವುದು)

ಶ್ರೀ ಪಿ.ಟಿ. ಪರಮೇಶ್ವರ ನಾಯ್ಕ (ಮಾನ್ಯ ಕಾರ್ಮಿಕ ರಾಜ್ಯ ಸಚಿವರು)

ಅ) ಹೊಸಕೋಟೆ ತಾಲ್ಲೂಕಿನ 5 ಖಾಸಗಿ ಕಾರ್ಖಾನೆಗಳಲ್ಲಿ ಕಾರ್ಮಿಕರ ಶೋಷಣೆ ಸಂಬಂಧ 5 ದೂರುಗಳು ದಾಖಲಾಗಿರುತ್ತವೆ; ವಿವರಗಳು

1. ಮೆ॥ ಭೂಷಣ್ ಪವರ್ ಸ್ಟೀಲ್ಸ್ ಲಿಮಿಟೆಡ್, ನಂ. 55, ಕೆಐಎಡಿಬಿ ಇಂಡಸ್ಟ್ರೀಯಲ್ ಏರಿಯಾ, ಹೊಸಕೋಟೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ.
2. ಮೆ॥ ಚೋಲೋ ಟಬ್ರೋ ಮೆಷಿನರಿ ಇಂಟರ್‌ನ್ಯಾಷನಲ್ ಪ್ರೈವೇಟ್ ಲಿಮಿಟೆಡ್, ಜಡಿಗೇನಹಳ್ಳಿ, ಹೊಸಕೋಟೆ.
3. ಕೇಮ್ಸ್ ಪೊರ್ಜಿಂಗ್ ಲಿಮಿಟೆಡ್, ಹೊಸಕೋಟೆ.
4. ಕೇಮ್ಸ್ ಆಟೋ ಕಾಂಪೋನೆಂಟ್ ನಿಯಮಿತ, ಪ್ಲಾಟ್ ನಂ. 32/ಎ, ಕೆ.ಐ.ಎ.ಡಿ.ಬಿ. ಕೈಗಾರಿಕಾ ಪ್ರದೇಶ, ಹೊಸಕೋಟೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ.